7	ಚಿಕ್ಕಮಗಳೂರು	703974
8	ಚಿತ್ರದುರ್ಗ	1493820
9	ದಕ್ಷಿಣ ಕನ್ನಡ	624490
10	ಧಾರವಾಡ	475108
11	ಗುಲ್ಬರ್ಗಾ	2225864
12	ಹಾಸನ	1223070
13	ಕೊಡಗು	289818
14	ಕೋಲಾರ	1732903
15	ಮಂಡ್ಯ	1196995
16	ಮೈಸೂರು	1077465
17	ರಾಯಚೂರು	1233089
18	ಶಿವಮೊಗ್ಗ	1042316
19	ತುಮಕೂರು	2264796
20	ಉತ್ತರ ಕನ್ನಡ	680118
21	ಬಾಗಲಕೋಟೆ	1179676
22	ಚಾಮರಾಜನಗರ	638390
23	ದಾವಣಗೆರೆ	1022002
24	ಗದಗ	669713
25	ಹಾವೇರಿ	910103
26	ಕೊಪ್ಪಳ	726681
27	ಉಡುಪಿ	608939
	ಒಟ್ಟು	30688067

ರಾಜ್ಯದಲ್ಲಿ ಕೆ.ಹೆಚ್.ಡಿ.ಸಿ. ಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೇಕಾರರ ಸಮಸ್ಯೆಗಳು

1140 (1474) ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತಿಕೋಟ) ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೆ.ಹೆಚ್.ಡಿ.ಸಿ. ಅಡಿಯಲ್ಲಿ ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಜನ ನೇಕಾರರು ಕಾರ್ಯನಿರ್ವಹಿಸುತ್ತಿದ್ದಾರೆ, (ಜಿಲ್ಲಾವಾರು ನೇಕಾರರ ಪಟ್ಟಿ ನೀಡುವುದು) ?

ಆ) ಕೆ.ಹೆಚ್.ಡಿ.ಸಿ.ಯವರು ನೇಕಾರರಿಗೆ ಅನೇಕ ತಿಂಗಳುಗಳಿಂದ ಸರಿಯಾಗಿ ಕಚ್ಚಾ ನೂಲನ್ನು ಪೂರೈಸದೇ ಇರುವುದು ಮತ್ತು ಸರಿಯಾದ ಸಮಯದಲ್ಲಿ ಕೂಲಿ ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಕೆ.ಹೆಚ್.ಡಿ.ಸಿ.ಯವರಿಂದ ನೇಕಾರರಿಗೆ ಈ ರೀತಿ ತೊಂದರೆಯಾಗುತ್ತಿರುವುದಕ್ಕೆ ಕಾರಣಗಳೇನು ?

ಈ) ಕಷ್ಟದ ದಿನಗಳಲ್ಲಿ ಬಡ ನೇಕಾರರಿಗೆ ಕೆ.ಕೈ.ಅ.ನಿಗಮದಿಂದ ಆಗುತ್ತಿರುವ ತೊಂದರೆಗಳನ್ನು ಪರಿಹರಿಸಲು ಸರ್ಕಾರ ಏನು ಕ್ರಮ ಕೈಗೊಳ್ಳುವುದು ?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು) :

ಅ) ದಿನಾಂಕ: 31.1.2003ರಲ್ಲಿರುವಂತೆ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಡಿಯಲ್ಲಿ 12,410 ನೇಕಾರರು ಕಾರ್ಯನಿರ್ವಹಿಸುತ್ತಿದ್ದಾರೆ.

ಜಿಲ್ಲಾವಾರು ವಿವರ ಈ ಕೆಳಗಿನಂತಿದೆ :

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ನೇಕಾರರ ಸಂಖ್ಯೆ
1	ಬೆಂ-ಗ್ರಾಮಾಂತರ	167
2	ಬೆಂಗಳೂರು ನಗರ	034
3	ಬಿಜಾಪುರ	849
4	ಬಾಗಲಕೋಟೆ	3,528
5	ಬೀದರ್	551
6	ಧಾರವಾಡ	234
7	ಕೊಪ್ಪಳ	664
8	ಬಳ್ಳಾರಿ	169
9	ಚಿತ್ರದುರ್ಗ	112
10	ಚಾಮರಾಜನಗರ	105
11	ದಾವಣಗೆರೆ	203
12	ಹಾವೇರಿ	1,158
13	ಶಿವಮೊಗ್ಗ	80
14	ಬೆಳಗಾಂ	1,141
15	ಗದಗ್	1,225
16	ಗುಲ್ಬರ್ಗಾ	1,425
17	ರಾಯಚೂರು	55
18	ಕಾರವಾರ	10
19	ದಕ್ಷಿಣ ಕನ್ನಡ	32
20	ಕೋಲಾರ	160
21	ಹಾಸನ	32
22	ತುಮಕೂರು	376
23	ಮಂಡ್ಯ	100

ಆ) ಕೆಲವು ತಿಂಗಳುಗಳಿಂದ ಕಚ್ಚಾ ನೂಲು ಪೂರೈಕೆಯಲ್ಲಿ ವ್ಯತ್ಯಯ ಮತ್ತು ಸರಿಯಾದ ಸಮಯದಲ್ಲಿ ಕೂಲಿ ನೀಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಇ) ಪ್ರಸಕ್ತ ವರ್ಷದಲ್ಲಿ ಕೆ.ಕೈ.ಅ. ನಿಗಮಕ್ಕೆ ವಿದ್ಯಾ ವಿಕಾಸ ಯೋಜನೆಯಡಿಯಲ್ಲಿ ರೂ. 50 ಕೋಟಿಗಳ ಆದೇಶ ನೀಡಲಾಗಿದೆ. ಅಗ್ಗದರದ ಸೀರೆ ಪಂಚೆ ಯೋಜನೆಯನ್ನು

ಮುಂದುವರೆಸಲಾಗಿದ್ದು, ಪ್ರಸಕ್ತ ವರ್ಷ ಆಯವ್ಯಯದಲ್ಲಿ ರೂ. 202.50 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಈ ಎರಡು ಯೋಜನೆಗಳಿಗೆ ನಿಗಮವು ಬಂಡವಾಳ ತೊಡಗಿಸಿದೆ. ಕ.ಕೈ.ಅ. ನಿಗಮದಲ್ಲಿ ಹಣದ ಕೊರತೆ ಇರುವುದರಿಂದ ನೇಕಾರರಿಗೆ ಪರಿವರ್ತನ ದರ ನೀಡುವಲ್ಲಿ ವಿಳಂಬವಾಗಿರುವುದರಿಂದ ಸ್ವಲ್ಪ ತೊಂದರೆಯಾಗಿದೆ.

ಈ) ಈ ವಿಷಯ ಗಮನಕ್ಕೆ ಬಂದಿದ್ದು, ವಿದ್ಯಾ ವಿಕಾಸ ಯೋಜನೆಗೆ ಸರ್ಕಾರವು ರೂ. 8.00 ಕೋಟಿಗಳನ್ನು ಪ್ರಸಕ್ತ ಸಾಲಿನಲ್ಲಿ ಹಾಗೂ 2003-04ನೇ ಸಾಲಿನಲ್ಲಿ ರೂ. 12.00 ಕೋಟಿಗಳನ್ನು ಮುಂಗಡವಾಗಿ ನೀಡಲು ನಿರ್ಧರಿಸಿದೆ. ಹಣ ಬಿಡುಗಡೆಯಾದ ನಂತರ ನೇಕಾರರಿಗೆ ನೂಲು ವಿತರಿಸಲು ಮತ್ತು ಪರಿವರ್ತನಾ ದರವನ್ನು ನೀಡಲು ಕ್ರಮ ಕೊಳ್ಳಲಾಗುವುದು.

ಬೇಲೂರು ತಾಲ್ಲೂಕಿನಲ್ಲಿ ಮೊರಾರ್ಜಿದೇಸಾಯಿ ವಸತಿ ಶಾಲೆ ನಿರ್ಮಾಣ

1141 (1485) ಶ್ರೀ ಎಸ್.ಹೆಚ್. ಪುಟ್ಟರಂಗನಾಥ (ಬೇಲೂರು) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೇಲೂರು ತಾಲ್ಲೂಕಿನಲ್ಲಿ ಮೊರಾರ್ಜಿದೇಸಾಯಿ ವಸತಿ ಶಾಲೆ ತೆರೆಯುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆಯೇ ?

ಆ) ಬಂದಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗಿದೆ ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಬಂದಿದೆ.

ಆ) ಸದ್ಯಕ್ಕೆ 80 ವಸತಿ ಶಾಲೆಗಳನ್ನು ರಾಜ್ಯದ ಎಲ್ಲಾ ಭಾಗಗಳಲ್ಲಿ ನಿರ್ವಹಿಸುತ್ತಿದೆ. ಬೆಳ್ಳೂರು ತಾಲ್ಲೂಕಿನಲ್ಲಿ ಹೊಸ ವಸತಿ ಶಾಲೆಯನ್ನು ಆರಂಭಿಸಲು ಅನುದಾನ ಲಭ್ಯತೆ ಮೇಲೆ ಪರಿಶೀಲಿಸಲಾಗುವುದು.

ಬೀದರ್ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿರುವ ಸಣ್ಣ ಕೈಗಾರಿಕೆಗಳಿಗೆ ಸಬ್ಸಿಡಿ ಬಿಡುಗಡೆ

1143 (1487) ಶ್ರೀ ರಾಜೇಂದ್ರ ವರ್ಮ (ಪುಣಸೂರು) ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಹಾಗೂ ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ 3 ವರ್ಷಗಳ ಅವಧಿಯಲ್ಲಿ ಬೀದರ್ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಯಾವ ಯಾವ ಸಣ್ಣ ಕೈಗಾರಿಕೆಗಳಿಗೆ ಎಷ್ಟು ಮೊತ್ತದ ಸಬ್ಸಿಡಿಯನ್ನು ಮಂಜೂರು ಮಾಡಲಾಗಿದೆ ; (ಈ ಕೈಗಾರಿಕೆಗಳ ಹೆಸರು ಹಾಗೂ ಸಬ್ಸಿಡಿಯ ಮೊತ್ತದ ವಿವರ ಒದಗಿಸುವುದು) ?

ಆ) ಇವುಗಳ ಪೈಕಿ ಎಷ್ಟು ಸಣ್ಣ ಕೈಗಾರಿಕೆಗಳಿಗೆ ಸಬ್ಸಿಡಿ ಹಣವನ್ನು ಬಿಡುಗಡೆ ಮಾಡಲಾಗಿದೆ ಹಾಗೂ ಇನ್ನೂ ಎಷ್ಟು ಸಣ್ಣ ಕೈಗಾರಿಕೆಗಳಿಗೆ ಸಬ್ಸಿಡಿ ಹಣವನ್ನು ಬಿಡುಗಡೆ ಮಾಡಬೇಕಾಗಿದೆ ; (ಸಬ್ಸಿಡಿ ಹಣ ಬಿಡುಗಡೆ ಮಾಡಬೇಕಾಗಿರುವ ಕೈಗಾರಿಕೆಗಳ ಹೆಸರು ಇತರ ಪೂರ್ಣ ವಿವರಗಳನ್ನು ಒದಗಿಸುವುದು) ?

ಇ) ಮೇಲ್ಕಂಡ ಹಿಂದುಳಿದ ಜಿಲ್ಲೆಗಳಲ್ಲಿ ಸಬ್ಸಿಡಿ ಮಂಜೂರಾಗಿರುವ ಸಣ್ಣ ಕೈಗಾರಿಕೆಗಳ ಉದ್ಯಮಿಗಳು ಹಣ ಬಿಡುಗಡೆಯಾಗದಿರುವುದು ತೀವ್ರವಾದ ಸಂಕಷ್ಟವನ್ನು ಎದುರಿಸುತ್ತಿದ್ದು ಇವರುಗಳಿಗೆ ಪ್ರಾಧಾನ್ಯತೆಯ ಮೇಲೆ ಸಬ್ಸಿಡಿ ಹಣವನ್ನು ಬಿಡುಗಡೆ ಮಾಡಲು ಸರ್ಕಾರದ ಮುಂದಿರುವ ಕ್ರಮಗಳೇನು ; ಹಾಗೂ ಯಾವಾಗ ಇವರುಗಳಿಗೆ ಹಣವನ್ನು ಬಿಡುಗಡೆ ಮಾಡಲಾಗುವುದು ?